ಓ.ಎಸ್ 240/2018

ಪಿ.ಡಬ್ಲ್ಯೂ.1

ದಿನಾಂಕ:**11**.07.2025 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**.**

**ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ಶ್ರೀ ಎಸ್ ಎನ್ ಕೆ ವಕೀಲರಿಂದ**

ನನ್ನ ಅಕ್ಕ ಹಾಗೂ ತಂಗಿಯ ಮದುವೆ ಯಾವ ವರ್ಷ ಆಗಿರುತ್ತದೆ ಎಂದು ನನಗೆ ನೆನಪಿಲ್ಲ. ಈ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸಹ ನಿಮ್ಮ ವಾದಪತ್ರದಲ್ಲಿ ಸುಳ್ಳಾಗಿ ನಮೂದು ಮಾಡಿದ್ದೀರಿ ಎಂದರೆ ಸರಿಯಲ್ಲ. ನನ್ನ ತಾಯಿ 2012 ರಲ್ಲಿ ಮೃತಪಟ್ಟಿರುತ್ತಾರೆ. ದಿನಾಂಕ ಹಾಗೂ ತಿಂಗಳು ನೆನಪಿಲ್ಲ. ನನ್ನ ತಾಯಿ 2013 ರಲ್ಲಿ ಮೃತಪಟ್ಟಿರುತ್ತಾರೆ. ನಿಮ್ಮ ತಂದೆಯ ಜೀವಿತಾವಧಿಯವರೆಗೂ, ಪಡಿತರಚೀಟಿಯಲ್ಲಿ ನಿಮ್ಮ ತಂದೆ ಮತ್ತು ತಾಯಿಯ ಹೆಸರು ಮಾತ್ರ ನಮೂದು ಇತ್ತು ಎಂದರೆ ನನಗೆ ನೆನಪಿಲ್ಲ. 2013 ನೇ ಇಸವಿಯ ನನ್ನ ಪಡಿತರ ಚೀಟಿಯಲ್ಲಿ ನನ್ನ ಹಾಗೂ ನನ್ನ ಹೆಂಡತಿ ಹೆಸರು ಮಾತ್ರ ಇತ್ತು. 2013 ನೇ ಇಸವಿಯಲ್ಲಿ ನಿಮ್ಮ ಹಾಗೂ ನಿಮ್ಮ ಹೆಂಡತಿಯ ಹೆಸರು ಪಡಿತರಚೀಟಿಯಲ್ಲಿ ಇರುವ ಬಗ್ಗೆ ನಿಮಗೆ ಅರಿವು ಇತ್ತು ಎಂದರೆ ಸಾಕ್ಷಿ ನಾವು ಬೇರೆಯಾಗಿ ಪಡಿತರ ಚೀಟಿ ಮಾಡಿಸಿಕೊಂಡಿದ್ದೇವೆ.

ನಿಮ್ಮ ತಂದೆ ಸರ್ಕಾರಿ ನೌಕರಿಯಲ್ಲಿದ್ದ ಕಾರಣ ಅವರು ಸುಸ್ಥಿತಿಯಲ್ಲದ್ದರು ಎಂದರೆ ಸರಿ. ಸಾಮಾನ್ಯವಾಗಿ ಒಂದು ಕುಟುಂಬ ಒಟ್ಟಾಗಿ ಜೀವನ ಮಾಡುತ್ತಿದ್ದರೆ ಒಂದೇ ಪಡಿತರ ಚೀಟಿಯಲ್ಲಿ ಎಲ್ಲಾ ಸದಸ್ಯರ ಹೆಸರು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ನೀವು ಹಾಗೂ ನಿಮ್ಮ ತಂದೆ ತಾಯಿ ಬೇರೆ ಇದ್ದ ಕಾರಣ ಬೇರೆ ಬೇರೆ ಪಡಿತರ ಚೀಟಿ ಇದೆ ಎಂದರೆ ಸಾಕ್ಷಿ ನಾವು ಒಟ್ಟಾಗಿ ಇದ್ದೆವು. ನನ್ನ ತಂದೆ ಯಾವಾಗ ನಿವೃತ್ತಿ ಹೊಂದಿರುತ್ತಾರೆಂದು ನನಗೆ ನೆನಪಿಲ್ಲ.

ನಮ್ಮ ಜಮೀನಿನ ಪೂರ್ವಕ್ಕೆ ಕಾಲುವೆ, ಪಶ್ಚಿಮಕ್ಕೆ ಯುವರಾಜ್, ಉತ್ತರಕ್ಕೆ ಪಳನಿಸ್ವಾಮಿ, ದಕ್ಷಿಣಕ್ಕೆ ನಂಜುಂಡಸ್ವಾಮಿ. ಪ್ರತಿವಾದಿಗಳು ನಮ್ಮ ಸ್ವಾಧೀನಕ್ಕೆ ಅಡ್ಡಪಡಿಸಿದ್ದ ಬಗ್ಗೆ ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.